ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ:ರವರ ನ್ಯಾಯಾಲಯ: ಕೊಪ್ಪ

ಸಿಸಿ.ನಂ.**465/2023**

ಸಾಕ್ಷಿಯ ಹೆಸರು: ಅಭಿಷೇಕ್ ಚಾಸಾ : 12

ತಂದೆ ಹೆಸರು: ಪ್ರಕಾಶ ಚಂದ್ರು ಪ್ರಾಸಾ: 9

ವಯಸ್ಸು: 28 ವರ್ಷ

ಉದ್ಯೋಗ: ಚಾಲಕ

ವಾಸ: ಹೆಗ್ಗದ್ದೆ , ಕೂಳೂರು ಗ್ರಾಮ

ದಿನಾಂಕ:07/05/2026 ರಂದು ಪ್ರಮಾಣವಚನ ಬೋಧಿಸಲಾಯಿತು.

::ಮುಖ್ಯ ವಿಚಾರಣೆ:: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:

ಪ್ರಕರದ ಬಗ್ಗೆ ನನಗೆ ಏನೂ ಗೊತ್ತಿರುವುದಿಲ್ಲ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಯಿತು. ಸದರಿ ದಾಖಲೆ ಸ್ಥಳಮಹಜರಾಗಿದ್ದು ಅದನ್ನು ನಿಪಿ.24 ಎಂದು ಈಗಾಗಲೆ ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ.24(ಬಿ) ಎಂದು ಗುರುತಿಸಲಾಯಿತು. ನಿಪಿ.1 ಕ್ಕೆ ನಾನು ಯಾವಾಗ ಸಹಿ ಮಾಡಿರುತ್ತೇನೆ ಎಂದು ಗೊತ್ತಿಲ್ಲ. ನಿಪಿ.24 ಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೇ ವಸ್ತುವನ್ನು ವಶಕ್ಕೆ ಪಡೆದಿರುವುದಿಲ್ಲ.

ಸಾಕ್ಷಿಗೆ ಈಗ ಇನ್ನೊಂದು ದಾಖಲೆ ಸ್ಥಳ ಮಹಜರಾಗಿದ್ದು ಅದನ್ನು ನಿಪಿ.25 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.25 ಬಿ ಎಂದು ಗುರುತಿಸಲಾಯಿತು. ನಿಪಿ.25 ಕ್ಕೆ ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ.

ಸಾಕ್ಷಿಗೆ ಈಗ ಎರಡು ಭಾವಚಿತ್ರವನ್ನು ತೋರಿಸಲಾಯಿತು. ಸದರಿ ಭಾವಚಿತ್ರಗಳಲ್ಲಿ ಸಾಕ್ಷಿ ತನ್ನನ್ನು ನೋಡಿ ಗುರುತಿಸುತ್ತಾರೆ. ಸದರಿ ಭಾವಚಿತ್ರವನ್ನು ನಿಪಿ.26 ಹಾಗೂ 27 ಎಂದು ಗುರುತಿಸಲಾಯಿತು. ಸದರಿ ಭಾವಚಿತ್ರಗಳನ್ನು ಯಾವ ವಿಚಾರಕ್ಕಾಗಿ ಹಾಗೂ ಎಲ್ಲಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.26 ಹಾಗೂ 27 ರಲ್ಲಿ ಪೋಲಿಸರ ಕೋರಿಕೆ ಮೇರೆಗೆ ನಿಂತಿರುತ್ತೇನೆ.

ಸಾಕ್ಷಿಗೆ ಒಂದು ಕಬ್ಬಿಣದ ಮರದ ಹಿಡಿ ಇರುವ ಚೂರಿ ಮತ್ತು ಮರದ ಹಿಡಿ ಇರುವ ಒಂದು ಚಾಕು , ಒಂದು ತಕ್ಕಡಿ, ಒಂದು ನೋಕಿಯಾ ಕಂಪನಿಯ ಕಪ್ಪು ಬಣ್ಣದ ಕೀ ಪ್ಯಾಡ್ ಮೊಬೈಲ್ ಅನ್ನು ತೋರಿಸಲಾಗಿದ್ದು ಸಾಕ್ಷಿಯು ಸದರಿ ಅವುಗಳನ್ನು ಗುರುತಿಸುವಲ್ಲಿ ನಿರಾಕರಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಬೇಕೆಂದು ಕೋರಲಾದ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)

ಪಾಟೀ ಸವಾಲು ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ದಿಃ09/09/2022 ರಂದು ಕೊಪ್ಪ ತಾಲೂಕು ಮೇಗುಂದ ಹೋಬಳಿ ಎಲೆಮಡಲು ಗ್ರಾಮದ ಶಾಂತಿಪುರ ವಾಸಿ ಷರೀಫ್ ಬಿನ್ ಆಲಿಯಬ್ಬ ಅವರ ವಾಸದ ಮನೆ ಮುಂಭಾಗದಲ್ಲಿ ಘಟನೆಗೆ ಸಂಬಂಧಿಸಿ ಅಮಾನತು ಮಹಜರ್ ಜರುಗಿಸಿದ್ದು 1 ನೇ ಆರೋಪಿ 07/09/2021 ರಂದು ರಾತ್ರಿ 7 ಗಂಟೆ ಸಮಯದಲ್ಲಿ ತಾನು ಕುಂದೂರು ಸೈಟ್ ವಾಸಿ ರಮೇಶ್ ನಿಡುವಾನೆ ವಾಸಿ ಹಮೀದ್ ಹಾಗೂ ರವಿ ನಗರ ವಾಸಿ ವಸಂತ ಅವರು ಸೇರಿಕೊಂಡು ಮಲ್ಲಿಗೆ ಬೈಲು ವಾಸಿ ಪ್ರಕಾಶ್ ತೋಟದ ಮೇಲುಬಾಗದ ಕಾಡಿನಲ್ಲಿ ಒಂದು ಎತ್ತಿನ ಗುಡ್ಡವನ್ನು ಕಡಿದು ಮಾಂಸ ಮಾಡಿ ಸದರಿ ಮಾಂಸವನ್ನು 2 ಪ್ಲಾಸ್ಟಿಕ್ ಚೀಲಗಳಿಗೆ ತುಂಬಿಸಿಕೊಂಡು , ಅದರ ಜೊತೆಯಲ್ಲಿ ದನ ಕಡಿಯಲು ತೆಗದಕೊಂಡು ಹೋಗಿದ್ದ ಚಾಕು ಮತ್ತು ಚೂರಿಯನ್ನ ಕೆಎ- 20 ಕ್ಯೂ 7434 ಹೊಂಡಾ ಆಕ್ಟಿವಾ ಸ್ಕೂಟಿ ಹಾಗೂ ಬೆಳಕಿಗಾಗಿ ಬಳಸಿದ ಮೊಬೈಲ್ , ತೂಕ ಮಾಡಲು ಇಟ್ಟುಕೊಂಡಿದ್ದ ಕಬ್ಬಿಣದ ತಕ್ಕಡಿ , ತೂಕದ ಬಟ್ಟುಗಳನ್ನು ಇಟ್ಟಿರುವ ಸ್ಥಳ ಹಾಗೂ ಮಾಂಸವನ್ನು ತಂದ 2 ಚೀಲಗಳನ್ನು ಹಾಗು ದನಗಳನ್ನು ಉಪಯೆಗಿಸಿದ ಪ್ಲಾಸ್ಟಿಕ್ ಚೀಲಗಳನ್ನು ಹಳ್ಳದ ನೀರಿಗೇ ಎಸೆದಿರುವುದಾಗಿ ತೋರಿಸಿದ್ದು ಮಹಜರ್ ಜರುಗಿಸಲು ನನ್ನನ್ನು ಹಾಗೂ ಚಾಸಾ 12 ರವರಿಗೆ ನಿಪಿ.25 ರಂತೆ ನೋಟಿಸ್ ಜಾರಿ ಮಾಡಿದ್ದು ಕೃತ್ಯಕ್ಕೆ ಬಳಸಿದ ಚೂರಿ , ಚಾಕು, ಮೊಬೈಲ್ ಹಾಗು ಕಬ್ಬಿಣದ ತಕಕಡಿಯನ್ನು ವಶಕ್ಕೇ ಪಡೆದು ಸದರಿ ಮಹಜರನ್ನು 7 ರಿಂದ 9 ಗಂಟೆಯವರೆಗೂ ನನ್ನ ಹಾಗೂ ಚಾಸಾ 12 ರವರ ಸಮಕ್ಷಮ ನಿಪಿ.24 ಮಹಜರ್ ಜರುಗಿಸಿದ್ದು ಆ ಸಮಯದಲ್ಲಿಪೋಟೋ ತೆಗೆಯಲಾಗಿತ್ತು ಎಂದರೆ ಸರಿಯಲ್ಲ.

ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಓ.

ಸಹಿ/-

(ನಂದಿನಿ ಎಂ. ಎನ್.)

ಸಿವಿಲ್ ನ್ಯಾಯಾಧೀಶರು ಮತ್ತು

ಸಾಕ್ಷಿಯ ಸಹಿ: ಪ್ರ.ದ.ನ್ಯಾ.ದಂ: ಕೊಪ್ಪ.